ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 26.

ಬೆಂಗಳೂರು, ಗುರುವಾರ, ಜೂ ತಾ|| 27, ಸಂ 1907.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಪ್ರಯ್ಯೇ ಬೇರೆ ಬೇರೆಯಾಗಿ ಪುಟನಂಬೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಲೆಕ್ಟೋಲರವರು, ಪಬ್ಲಿಕವರಕಸ ಆಫಿಸರಗಳು, ಫಾರಸ್ಟು, ರೆಜಿಸ್ಟ್ರೇರ್ ವ ಎಡ್ಯುಕೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇರ್ಷಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| 18ನೆ ಜೂ 1907.

ನಂ. 11956—ಸ್ಯಾ. 124-06—6, 1897ನೆ ಇಸವಿಯ 2ನೆ ನಂಬರ್ ಸಾಂಕ್ರಾಮಿಕ ಜಾಡ್ಯೆಗಳ ರೆಗ್ಯುಲೇಷನಿನ 2ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಜಲಾಯಿಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಕೆಳಗೆ ನಮೂದಿಸುವ ರೆಗ್ಯುಲೇಷನನ್ನು ಹುಟ್ಟಿಸಲು ಹುಕುಂ ದಯಪಾಲಿಸುತ್ತಾರೆ:—

ಜನರ ಸಾಖ್ಯವನ್ನು ಕಾಪಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕೂ ಡಿಸಿನ್‌ಫೆಕ್ಷನ್ ವಗೈರೆ ಕ್ರಮಗಳನ್ನನುಸರಿಸುವುದರ ಮೂಲಕ ಜಾಸ್ತಿದ ಸೊಂಕನ್ನು ಕಮ್ಮಿ ಮಾಡುವುದಕ್ಕೂ ಅನುಕೂಲಿಸುವಂತೆ, ಬೆಂಗಳೂರು ಸಿಟಿ ಮತ್ತು ಕೋಲಾರದ ಚಿನ್ನದ ಗಣಿಗಳಲ್ಲಿರುವ ಜನರೆಲ್ಲರೂ ತಮ್ಮ ಮನೆಗಳಲ್ಲಿ ಸತ್ತ ಇಲಿಗಳನ್ನು ಕಂಡ ಸಂಗತಿಯನ್ನು ಕೂಡಲೆ ಹೆಲ್ತ್ ಆಫಿಸರ್ ಯಾ ಆರೋಗ್ಯಾಧಿಕಾರಿಗಾಗಲಿ ಅಥವಾ ಸ್ಥಳೀಯ ಇತರ ಅಧಿಕಾರಿಗಾಗಲಿ ಹಾಗೆ ಕಂಡ 12 ಘಂಟೆಗಳ ಒಳಗಾಗಿ ರಿಪೋರ್ಟು ಮಾಡಬೇಕಾದ್ದು ಅವರ ಅವಶ್ಯ ಕರ್ತವ್ಯವಾಗಿರುತ್ತದೆ.